# ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ19/04/2025**

ಸಿ.ಸಿ. **ನಂ.903/2022**

ಪಿ.ಡಬ್ಲ್ಯೂ- *1*

( ಪಾಟೀ ಸವಾಲು ಶ್ರೀ. ಡಿ.ಎಸ್. ವಕೀಲರಿಂದ ಆರೋಪಿಯ ಪರವಾಗಿ )

ನನಗೆ ಆರೋಪಿಯ ಕುಟುಂಬ ಪರಿಚಯವಿದೆ. ಆರೋಪಿಯ ಅಣ್ಣತಮ್ಮಂದಿರು ಎಷ್ಟು ಜನ ಇದ್ದಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ. ಆರೋಪಿಯ ತಂದೆ-ತಾಯಿ ಗೊತ್ತು. ನಾನು ಎಂ.ಎ. ಪದವಿಯನ್ನು ಪಡೆದಿದ್ದೇನೆ. ಆರೋಪಿ ನನಗೆ ಸುಮಾರು *6-7* ವರ್ಷಗಳಿಂದ ಪರಿಯವಿದ್ದಾರೆ. ಅವರು ಏನು ಕೆಲಸ ಮತ್ತು ಎಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬ ವಿಚಾರ ನನಗೆ ತಿಳಿದಿದೆ. ಆರೋಪಿ ರಾಮನಾಥಪುರದಲ್ಲಿ ಕೆಲಸದಲ್ಲಿದ್ದಾಗ ನಮ್ಮ ಮನೆಯ ಪಕ್ಕದಲ್ಲಿ ಇದ್ದರು.

ಆರೋಪಿ ನನ್ನ ಬಳಿ ಕೈಸಾಲ ತೀರಿಸಲು ಹಾಗೂ ಮನೆ ಕಟ್ಟಲು ಸಾಲವನ್ನು ಕೇಳಿದ್ದರು. ದಿಃ*20-04-2022*ರಂದು ಆರೋಪಿ ನನ್ನ ಬಳಿ ಸಾಲ ಕೇಳಿದ್ದರು. ದಿಃ*23-04-2022* ರಂದು ಆರೋಪಿಗೆ ಸಾಲವನ್ನು ನೀಡಿರುತ್ತೇನೆ. ನಾನು ಆರೋಪಿಗೆ ಕೊಟ್ಟ *5* ಲಕ್ಷ ಹಣ ನನ್ನ ಮನೆಯಲ್ಲೀ ಇತ್ತು. *2*ಲಕ್ಷಗಿಂತ ಹೆಚ್ಚಿಗೆ ಹಣವನ್ನು ಮನೆಯಲ್ಲಿ ಇಟ್ಟುಕೊಳ್ಳಬಾರದು ಎಂದು ಕಾನೂನು ಇದೆ ಎಂದರೆ ಸಾಕ್ಷಿಯ ಹೌದು ಎಂದು ನುಡಿಯುತ್ತಾರೆ. ಸದರಿ *5* ಲಕ್ಷಣ ಹಣ ನನಗೆ ವ್ಯವಸಾಯದಿಂದ ಮತ್ತು ನಾನು ಅತಿಥಿ ಉಪನ್ಯಾಸಕನಾಗಿ ಕೆಲಸ ಮಾಡುತ್ತಿದ್ದರಿಂದ ಬಂದ ಹಣವಾಗಿರುತ್ತದೆ.

ನಮ್ಮ ಕುಟುಂಬಕ್ಕೆ *1*ವರೆ ಎಕರೆ ಜಮೀನು ಇದೆ. ಸದರಿ ಜಮೀನಿಗೆ ಸಂಬಂಧಿಸಿದಂತೆ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಲ್ಲೆ. ಸದರಿ ಜಮೀನಿನಲ್ಲಿ ಹೋಗೆಸೊಪ್ಪು, ಭತ್ತ ರಾಗಿಯನ್ನು ಬೆಳೆಯುತ್ತೇನೆ. ಸದರಿ ಬೆಳೆಗಳಿಂದ ವಾರ್ಷಿಕವಾಗಿ *50* ಸಾವಿರದಿಂದ *1* ಲಕ್ಷದವರೆಗೆ ಆದಾಯ ಬರುತ್ತದೆ. ಸದರಿ ಆದಾಯಕ್ಕೆ ಸಂಬಂದಿಸಿದಂತೆ ಆದಾಯ ದೃಡೀಕರಣ ಪತ್ರವನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ಅತಿಥಿ ಉಪನ್ಯಾಸಕನಾಗಿ ನಮ್ಮ ತಾಲ್ಲೂಕಿನ, ಸರ್ಕಾರಿ ಪ್ರಮ ದರ್ಜೆ ಕಾಲೇಜ್, ಕೊಣನೂರು ಮತ್ತು ಕುಶಾಲನಗರ, ಹೀಗೆ ಸುಮಾರು *20* ಕಾಲೇಜ್ ಗಳಲ್ಲಿ ನಾನು ಅತಿಥಿ ಉಪನ್ಯಾಸಕನಾಗಿ ಕರ್ತವ್ಯವನ್ನು ನಿರ್ವಹಿಸಿದ್ದೇನೆ. ಸುಮಾರು *15* ರಿಂದ *20* ವರ್ಷಗಳ ಕಾಲ ಅತಿಥಿ ಉಪನ್ಯಾಸಕನಾಗಿ ಕೆಲಸ ಮಾಡಿರುತ್ತೇನೆ. ನನಗೆ ಸದರಿ ಕೆಲಸದಿಂದ ನನಗೆ ಮೊದಲು ತಿಂಗಳಿಗೆ *10* ರಿಂದ *15* ಸಾವಿರ ರೂ. ಸಂಬಳ ಬರುತ್ತಿತ್ತು. ನಂತರ *32* ಸಾವಿರ ಸಂಬಂಳ ಬರುತ್ತಿತ್ತು. ಸದರಿ ಸಂಬಂಳಕೆ ಸಂಬಂದಿಸಿದಂತೆ ನಾನು ಕಾರ್ಯನಿವಹಿಸಿದ ಕಾಲೇಜ್ ಗಳಿಗೆ ಸಂಬಂಧಪಟ್ಟ ಸೇವಾ ದೃಡೀಕರಣ ಪತ್ರಗಳನ್ನು ತಂದು ನ್ಯಾಯಾಲಯಕ್ಕೆ ಹಾಜರುಪಡಿಸುವ ಸಂದರ್ಭ ಬಂದಿರಲಿಲ್ಲ ಎಂದು ನುಡಿಯುತ್ತಾರೆ.

ನಾನು ಪ್ರಸ್ತುತ ಈಗ ಮೊಬೈಲ್ ಸರ್ವೀಸ್ ಶಾಪ್ ನ್ನು ಇಟ್ಟುಕೊಂಡಿದ್ದು, ಸದರಿ ಶಾಪ್ ನಿಂದ ನನಗೆ ದಿನಕ್ಕೆ *1* ರಿಂದ *1*ವರೆ ಸಾವಿರದ ಆದಾಯ ಬರುತ್ತದೆ. ಸದರಿ ಶಾಪ್ ನ ಓನರ್ ಶಿವಣ್ಣನವರಿಂದ ಬಾಡಿಗೆ ಪಡೆದುಕೊಂಡಿದ್ದೇನೆ. ಸದರಿ ಬಾಡಿಗೆಗೆ ಸಂಬಂಧಿಸಿದಂತೆ ಕಾರಾರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸದರಿ ಶಾಪ್ ನಿಂದ ಒಂದು ತಿಂಗಳಿಗೆ *60* ಸಾವಿರ ಆದಾಯ ಬರುತ್ತದೆ. ಸದರಿ ಆದಾಯಕ್ಕೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ.

(ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರ ವಕೀಲರು ಸಮಯಾವಕಾಶವನ್ನು ಕೇಳಿದ್ದು ಅನುಮತಿಸಲುತು.)

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )**

**ಓ.ಹೇ.ಕೇ.ಸ.ಇದೆ.**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.